ತಿಜೋರಿಯಲ್ಲಿ ಎಷ್ಟೇ ಚಿನ್ನದ, ವಜ್ರದ, ನವರತ್ನ ಸೇರಿದಂತೆ ಅಮೂಲ್ಯ ಹರಳುಗಳ ಒಡವೆಗಳಿದ್ದರೂ ಮುತ್ತಿನ ಒಡವೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಇದ್ದೇ ಇರುತ್ತದೆ. ಇದೇ ಮುತ್ತಿನ ಕರಾಮತ್ತು.

'ನೈಜ ಮುತ್ತುಗಳು ಎಷ್ಟು ವರ್ಷಗಳಾದರೂ ಬಣ್ಣ ಮಾಸುವುದಿಲ್ಲ, ಅಂದಗೆಡುವುದಿಲ್ಲ, ಹಾಳಾಗುವುದಿಲ್ಲ. ಆದರೆ ಕೃತಕ ಮುತ್ತುಗಳು ದಿನಗಳೆದಂತೆ ಅಂದಗೆಡುತ್ತದೆ. ಬಣ್ಣ ಮಾಸುತ್ತದೆ. ಮುತ್ತಿನ ಮೇಲೆ ಪದರ ಎದ್ದು ಬರುತ್ತದೆ. ಆಗ ಇಂಥ ಆಭರಣ ಧರಿಸಿದರೆ ನೋಡಲು ಚೆನ್ನಾಗಿರುವುದಿಲ್ಲ' ಎಂದು ಹೇಳುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಮುತ್ತಿನ ಒಡವೆ ವರ್ತಕ ಚಂದಾಲಾಲ್.

'ಈಗೀಗ ನಕಲಿ ಮುತ್ತುಗಳ ಹಾವಳಿ ಹೆಚ್ಚಾಗುತ್ತಿದೆ. ನೈಜ ಮುತ್ತುಗಳ ಅಂದಕ್ಕೂ ಸಡ್ಡು ಹೊಡೆಯುವಂತಿರುವ ಈ ಆಭರಣಗಳಿಗೆ ಹೆಣ್ಣುಮಕ್ಕಳು ಮಾರುಹೋಗುತ್ತಿದ್ದಾರೆ. ಕಡಿಮೆ ಬೆಲೆಯಲ್ಲಿ ದೊರೆಯುವ ಕಾರಣ ಇಂತಹ ಒಡವೆಗಳಿಗೆ ಬೇಡಿಕೆಯೂ ಹೆಚ್ಚುತ್ತಿದೆ. ಏನೇ ಆದರು ನೈಜ ಮುತ್ತುಗಳ ಅಂದವನ್ನು ವರ್ಣಿಸಲಾಗದು' ಎಂದು ಹೇಳುತ್ತಾರೆ ಅವರು.

### ವಧುವಿನ ಆಭರಣ

ವಧುವಿನ ಅಲಂಕಾರಕ್ಕಾಗಿ ವಿಶೇಷವಾಗಿ ವಿನ್ಯಾಸಗೊಳಿಸಿರುವ ಮುತ್ತಿನ ಆಭರಣಗಳು ಈಗ ಹೆಚ್ಚಿನ ಬೇಡಿಕೆ ಗಳಿಸುತ್ತಿವೆ. ವಧುವಿನ ಆಭರಣಗಳು ಸಾಂಪ್ರದಾಯಿಕವಾಗಿದ್ದು, ಅತ್ಯುತ್ತಮ ಕರಕುಶಲತೆಯ ಪ್ರತಿಬಿಂಬವಾಗಿರುತ್ತವೆ. ಇದಕ್ಕಾಗಿ ದೊಡ್ಡ ದೊಡ್ಡ ಆಭರಣ ಮಳಿಗೆಗಳು ಮುತ್ತಿನಿಂದ ಮಾಡಿದ ವಧುವಿನ ಆಭರಣಗಳ ವಿಶೇಷ ಸಂಗ್ರಹವನ್ನೊಳಗೊಂಡ ಪ್ರತ್ಯೇಕ ವಿಭಾಗವನ್ನೇ ತೆರೆದು ಗ್ರಾಹಕರತ್ತ ಮುಖ ಮಾಡಿದ್ದಾರೆ. ಕರಕೌಶಲ್ಯ, ಪರಿಪಕ್ವತೆ ಇರುವ ಮತ್ತು ಸೂಕ್ಷ್ಮದೃಷ್ಟಿಯನ್ನು ಹೊಂದಿರುವ ನುರಿತ ಕೆಲಸಗಾರರಿಂದ ಮುತ್ತಿನ ವಿವಿಧ ಆಭರಣಗಳನ್ನು ವಿನ್ಯಾಸಗೊಳಿಸಿ ಮಾರಾಟದಲ್ಲಿ ಪೈಪೋಟಿಯನ್ನೂ ನಡೆಸುತ್ತಿದ್ದಾರೆ.

### ಮುತ್ತಿನೊಡವೆ ಸಂರಕ್ಷಣೆ ಹೇಗೆ?

ಮುತ್ತಿನ ಒಡವೆಗಳನ್ನು ಜತನವಾಗಿ ಕಾಪಾಡಿಕೊಂಡು ಬರಬೇಕು. ಇಂಥ ಒಡವೆಗಳನ್ನು ನಿತ್ಯವೂ ಬಳಸದೇ ಇರುವ ಕಾರಣ ಜೋಪಾನವಾಗಿ ತೆಗೆದಿಡುವುದು ಮುಖ್ಯ. ಹಾಗಾದರೆ ಮುತ್ತಿನ ಆಭರಣಗಳ ಸಂರಕ್ಷಣೆ ಹೇಗೆ? ಇಲ್ಲಿದೆ ಟಿಪ್ಸ್.

- ಮುತ್ತಿನ ಒಡವೆ ಧರಿಸಿದ ಮೇಲೆ ತೆಗೆದಿಡುವಾಗ ಹತ್ತಿಯಿಂದ ಒರೆಸಿ ಇಡಬೇಕು.
- ಮುತ್ತಿನ ಒಡವೆಗಳನ್ನು ಧರಿಸಿದ ಮೇಲೆ ಅವುಗಳಿಗೆ ನೀರನ್ನು ತಾಗಿಸಬೇಡಿ. ಸ್ನಾನದ ವೇಳೆ ಮುತ್ತಿನೊಡವೆ ತೆಗೆದಿಡಿ. ಸಾಬೂನು, ಬಿಸಿನೀರು, ಶಾಂಪು, ಕಂಡೀಷನರ್ ಮುತ್ತಿಗೆ ತಾಗಿದರೆ ಅಂದಗೆಡಬಹುದು.
- ಮುತ್ತಿನ ಒಡವೆಗಳ ಜೊತೆಗೆ ಬೇರೆ ಯಾವುದೇ ಒಡವೆಗಳನ್ನು ಧರಿಸಬೇಡಿ. ತೆಗೆದಿಡುವಾಗಲೂ ಮುತ್ತಿನ ಆಭರಣಗಳನ್ನು ಪ್ರತ್ಯೇಕವಾಗಿ ಇಡಿ.

# ಫ್ಯಾಷನಬಲ್ ಮುತ್ತು

**ಕಪ್ಪೆಚಿಪ್ಪಿನ ಒಳಗಿನ ಚಂದದ ಮುತ್ತು
ಹೊಳೆಯುವ ಸುಂದರ ಸ್ವಾತಿಮುತ್ತು
ಹೆಣ್ಣಿನ ಸೌಂದರ್ಯಕ್ಕೀಗ ಕರಾಮತ್ತು
ಮುತ್ತಿನ ಮತ್ತೇ ಎಂದಿಗೂ ಗಮ್ಮತ್ತು**

ರಾಜಮಹಾರಾಜರ ಕಾಲದಿಂದಲೂ ಮುತ್ತಿನ ಒಡವೆಗೆ ವಿಶೇಷವಾದ ಮನ್ನಣೆ ಇತ್ತು. ಅಜ್ಜಿಮುತ್ತಜ್ಜಿಯರ ಒಡವೆ ಸಂಗ್ರಹಗಳಲ್ಲಿಯೂ ಮುತ್ತು ಪ್ರಧಾನ ಸ್ಥಾನ ಪಡೆದಿದೆ. ಧರಿಸಿದ ಉಡುಗೆಗೆ ಹೆಚ್ಚಿನ ಮೆರುಗು ನೀಡುವ ಈ ಮುತ್ತಿನ ಒಡವೆ ಎವರ್ ಗ್ರೀನ್ ಫ್ಯಾಷನ್ ಟ್ರೆಂಡ್ ಎನಿಸಿದೆ. ಸಿನಿಮಾ ನಟಿಗಳೆಲ್ಲರ ಜ್ಯುವೆಲ್ಲರಿ ಕಲೆಕ್ಷನ್‌ನಲ್ಲಿ ಮುತ್ತಿನ ಒಡವೆ ಇದ್ದೇ ಇರುತ್ತದೆ. ಫ್ಯಾಷನ್ ಶೋಗಳಲ್ಲಿ ಮುತ್ತಿನ ಒಡವೆಯ ನೂರಾರು ಡಿಸೈನ್‌ಗಳ ಪ್ರದರ್ಶನ ನಡೆಯುತ್ತಿರುತ್ತದೆ.

ಮುತ್ತಿನ ಹಾರ, ಮೂಗುತಿ, ಬ್ರೇಸ್‌ಲೆಟ್, ಬಳೆ, ಬೆಲ್ಲಿ ಚೈನ್, ಸೊಂಟದ ಪಟ್ಟಿ, ಕಡಗ, ಕಾಲ್ಗೆಜ್ಜೆ, ಉಂಗುರ, ಕಿವಿಯೋಲೆ, ಹೇರ್ ಆಕ್ಸೆಸರೀಸ್, ಹ್ಯಾಂಡ್ ಬ್ಯಾಗ್‌ಗಳಲ್ಲಿಯೂ ಕಾಣಬಹುದು. ಮಾಡೆಲ್‌ಗಳ ಸ್ಯಾಂಡಲ್, ಶೂಗಳು, ಕಿರೀಟಗಳಿಗೆ ಮುತ್ತಿನ ಅಲಂಕಾರ ತನ್ನದೇ ಆದ ಛಾಪು ಮೂಡಿಸಿದೆ.

ಕಪ್ಪೆಚಿಪ್ಪಿನಿಂದ ಹೊರತೆಗೆಯಲಾದ ಮುತ್ತುಗಳನ್ನು ನೈಜ ಮುತ್ತಿನ ಗುಂಪಿಗೆ ಸೇರಿಸಲಾಗುತ್ತದೆ. ಇಂತಹ ಮುತ್ತುಗಳ ಬೆಲೆ ಹೆಚ್ಚು. ಇತ್ತೀಚಿನ ದಿನಗಳಲ್ಲಿ ಗ್ಲಾಸ್ ಮೆಟಲ್ಸ್, ಪ್ಲಾಸ್ಟಿಕ್, ಸೆರಾಮಿಕ್, ಸ್ಟೋನ್‌ಗಳಿಂದ ತಯಾರಿಸಿದ ಕೃತಕ ಮುತ್ತುಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಬಜೆಟ್ ಫ್ರೆಂಡ್ಲಿ ಆಗಿರುವ ಇಂತಹ ಫೇಕ್ ಪರ್ಲ್ ಒಡವೆಗಳು ಸಾಕಷ್ಟು ಬಣ್ಣ, ಆಕಾರ, ಸೈಜ್‌ಗಳಲ್ಲಿ ದೊರೆಯುತ್ತಿದ್ದು ಫ್ಯಾಷನ್‌ಪ್ರಿಯರಿಗೆ ಮೋಸ್ಟ್ ಫೇವರೆಟ್ ಎನಿಸಿದೆ.

ಒಂದೆಳೆಯ ಮುತ್ತಿನ ಸರ ಫಾರ್ಮಲ್ ಸೂಟ್ ಜೊತೆಗೆ ಪರ್ಫೆಕ್ಟ್ ಎನಿಸುತ್ತದೆ. ದಿನನಿತ್ಯ ಆಫೀಸ್, ಕಾಲೇಜು ಹೋಗುವಾಗ ಆರ್ಟಿಫೀಶಿಯಲ್ ಮುತ್ತಿನ ಪೆಂಡೆಂಟ್, ಸರ, ಕಿವಿಯೋಲೆ ಹಗುರವಾಗಿದ್ದು ಕಂಫರ್ಟಬಲ್ ಮತ್ತು ಕಲರ್‌ಫುಲ್ ಲುಕ್ ಕೊಡುತ್ತದೆ.

ಎಥ್ನಿಕ್, ಸೆಮಿ ಎಥ್ನಿಕ್, ವೆಸ್ಟರ್ನ್ ಸೇರಿದಂತೆ ಎಲ್ಲ ಬಗೆಯ ಉಡುಗೆಗಳಿಗೆ ಮುತ್ತಿನ ಒಡವೆಯ ಕರಾಮತ್ತನ್ನು ಕಾಣಬಹುದು. ನಿಶ್ಚಿತಾರ್ಥ, ಮದುವೆ, ರಿಸೆಪ್ಷನ್‌ಗಳಂಥ ಸಮಾರಂಭಗಳಿಗೆ ಅಲ್ಲದೇ ಹಬ್ಬಹರಿದಿನ, ದೇವರ ಪೂಜಾ ಕೈಂಕರ್ಯಗಳಿಗೆ ಮುತ್ತಿನ ಹಾರ ಚೆನ್ನಾಗಿ ಒಪ್ಪುತ್ತದೆ.

ಟ್ರೆಂಡ್‌ನಲ್ಲಿರುವ ಮುತ್ತಿನ ಒಡವೆಗಳು

ಬಿಗ್ ಪೆಂಡೆಂಟ್ ಮುತ್ತಿನ ಹಾರ, ಪ್ರೆಷಿಯಸ್ ಸ್ಟೋನ್ ಮಿಕ್ಸ್ ಮ್ಯಾಚ್ ಹೊಂದಿದ ಮುತ್ತಿನ ಹಾರ, ಲಾಂಗ್ ಚೈನ್ ಸರ, ಲೋಟಸ್, ರೋಸ್, ನವಿಲುಗಳಂತಹ ಪ್ರಕೃತಿಯನ್ನು ಪ್ರತಿಫಲಿಸುವ ಪೆಂಡೆಂಟ್ ಇರುವ ಹಾರ, ಟೈನಿ ಮುತ್ತಿನ ಎಳೆಗಳು, ಬಿಗ್ ಪರ್ಲ್ ವಿಕ್ಟೋರಿಯಾ ಸೆಟ್, ಜಿರ್ಕೊನಿ ಡಿಸೈನ್ ಪೆಂಡೆಂಟ್ ಹೀಗೆ ಹತ್ತಾರು ಬಗೆಗಳಿವೆ.

### ಪರ್ಲ್ ಫ್ಯಾಬ್ರಿಕ್

ಮೊದಲೆಲ್ಲ ಮುತ್ತುಗಳನ್ನು ಡ್ರೆಸ್‌ಗಳಿಗೆ, ಸೀರೆಯ ಕುಚ್ಚು, ಪಲ್ಲು, ಬಾರ್ಡರ್‌ಗಳಲ್ಲಿ ನೇಯ್ಗೆ ಮಾಡುವುದು ಶ್ರೀಮಂತಿಕೆಯ ಸಂಕೇತವಾಗಿತ್ತು. ನವಯುಗದ ಫ್ಯಾಷನ್ ಪ್ರಪಂಚದಲ್ಲಿ ಇಂದು ಪರ್ಲ್ ಡ್ರೆಸ್‌ಗಳು ಜನಪ್ರಿಯತೆ ಪಡೆಯುತ್ತಿವೆ. ಮುತ್ತುಗಳಿಂದಲೇ ನೇಯ್ದ ಡ್ರೆಸ್ ಜೊತೆಗೆ ಕಂಪ್ಲೀಟ್ ಪರ್ಲ್ ಜ್ಯುವೆಲ್ಲರಿ ಸೆಟ್ ಆನ್‌ಲೈನ್‌ನಲ್ಲೂ ಲಭ್ಯ.



ಡ್ರೆಸ್ಸಿಂಗ್ ಮತ್ತು ಮೇಕಪ್ ಮುಗಿದ ನಂತರವೇ ಮುತ್ತಿನ ಆಭರಣ ಧರಿಸಿ. ಪರ್ಫ್ಯೂಮ್, ಮೇಕಪ್ ಪ್ರಾಡಕ್ಟ್ ತಾಗದಂತೆ ಎಚ್ಚರ ವಹಿಸಿ. ಮುತ್ತುಗಳನ್ನು ಪೋಣಿಸಿದ ದಾರ ಮತ್ತು ಕೊಂಡಿಗಳನ್ನು ಪರೀಕ್ಷಿಸಿ ಧರಿಸಿ. ಬೆಲೆಬಾಳುವ ಮುತ್ತು ಕಳೆದುಹೋಗದಂತೆ ನೋಡಿಕೊಳ್ಳಿ. ಬೆವರಿನ ಕಲೆ ಆದರೆ ಶುದ್ಧ ನೀರಿನಲ್ಲಿ ಒಮ್ಮೆ ಅದ್ದಿ ತೆಗೆದು ಹತ್ತಿ ಬಟ್ಟೆಯಿಂದ ಒರೆಸಿ, ವೆಲ್ವೆಟ್ ಬಟ್ಟೆಯಲ್ಲಿ ಸುತ್ತಿ ಬಾಕ್ಸ್‌ನಲ್ಲಿಡಿ.

ಒರಿಜಿನಲ್ ಮುತ್ತಿನ ಒಡವೆ ಧರಿಸುವುದರಿಂದ ಅನೇಕ ಆರೋಗ್ಯ ಪ್ರಯೋಜನಗಳಿವೆ. ಬಿಳಿ ಮುತ್ತು ಚಂದ್ರನ ಸಂಕೇತ. ರಾಸಾಯನಿಕವಾಗಿ ಮುತ್ತುಗಳ ಕ್ಯಾಲ್ಸಿಯಂ ಕಾರ್ಬೋನೇಟ್. ಕ್ಯಾಲ್ಸಿಯಂ ಅಂಶದ ಕೊರತೆಯಿಂದ ಬಳಲುತ್ತಿರುವವರಿಗೆ ಮುತ್ತಿನ ಒಡವೆಯ ಧಾರಣೆ ಉತ್ತಮವಾಗಿದೆ. ಶುದ್ಧತೆ, ನೀರು, ದ್ರವಚಲನೆ ಮುತ್ತಿನಲ್ಲಿರುವ ಶಕ್ತಿಯ ಗುಣಲಕ್ಷಣಗಳು. ಸ್ತ್ರೀಯರ ಶಕ್ತಿ ಸಂಚಯನಕ್ಕೆ ಸಹಾಯಕವಾಗಿದೆ ಎನ್ನುತ್ತಾರೆ ತಜ್ಞರು.

**■ ಕವಿತಾ ವಿನು ಭಟ್**